1	2	3		4
		15.	ನರಸಿಂಗಪುರ	10.00
8.	ಬಿಜಾಪುರ	16.	ಕಾಖಂಡಕಿ	10.00
		17.	ಬಿಜ್ಜರಗಿ	10.00
		18.	ಜಯವಾಡಗಿ	10.00
		19.	ಗುಳೇದಗುಡ್ಡ	27.00
9.	ಧಾರವಾಡ	20.	ಧಾರವಾಡ	50.00
		21.	ಹಂಸಭಾವಿ	15.00
		22.	ಚಿನ್ನಮುಳಗುಂದ	14.50
		23.	ಯತ್ತಿನಹಳ್ಳಿ	14.50
10.	ರಾಯಚೂರು	24.	ಬೂದಿಗುಂಪ	10.00
11.	ಬೀದರ್	25.	ದುಬ್ಬಲಗುಂಡಿ	10.00
				400.00

ವಿಷಯ:- ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಹಾಸ್ಟೆಲುಗಳು.

34(122)

ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು):- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕಳೆದ ಮೂರು ವರ್ಷಗಳಿಂದ 1994-95 ರಿಂದ 1996-97ನೇ ಸಾಲಿನವರೆಗೆ ಕರ್ನಾಟಕ ರಾಜ್ಯದಲ್ಲಿ ಎಷ್ಟು ಹಾಸ್ಟೆಲ್‌ಗಳನ್ನು ತೆರೆಯಲಾಗಿರುತ್ತದೆ. ಈ ಪೈಕಿ ಎಷ್ಟು ಹಾಸ್ಟೆಲ್‌ಗಳನ್ನು ಬಾಡಿಗೆ ಕಟ್ಟಡಗಳಲ್ಲಿ ನಡೆಸಲಾಗುತ್ತಿದೆ. ಎಷ್ಟು ಸ್ಥಳಗಳಲ್ಲಿ ಸ್ವಂತ ಕಟ್ಟಡಗಳನ್ನು ಕಟ್ಟಲಾಗಿರುತ್ತದೆ? ಎಷ್ಟು ಸ್ಥಳಗಳಲ್ಲಿ ಹಣ ಮಂಜೂರಾಗಿದ್ದು ನಿವೇಶನಗಳು ದೊರಕಿರುವುದಿಲ್ಲ;

ಆ) ವರ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳು ಇರುತ್ತವೆ, ಯಾವ ಯಾವ ಸ್ಥಳಗಳಲ್ಲಿ ಬಾಡಿಗೆ ಕಟ್ಟಡದಲ್ಲಿದೆ ಮತ್ತು ಸ್ವಂತ ಕಟ್ಟಡಗಳಲ್ಲಿವೆ. ಹಾಸ್ಟೆಲ್‌ಗಳನ್ನು ಕಟ್ಟಲು ಹಣ ಮಂಜೂರಾಗಿದೆಯೆ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-

ಅ) ಕಳೆದ ಮೂರು ವರ್ಷಗಳಿಂದ ಅಂದರೆ, 1994-95 ರಿಂದ 1996-97ನೇ ಸಾಲಿನ ವರೆಗೆ 101 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಮತ್ತು 49 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ತೆರೆಯಲಾಗಿದೆ. ಇವುಗಳ ಪೈಕಿ 145 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಒಂದು ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡ ನಿರ್ಮಾಣವಾಗಿದೆ. ನಾಲ್ಕು ವಿದ್ಯಾರ್ಥಿನಿಲಯಗಳು ಉಚಿತ ಕಟ್ಟಡದಲ್ಲಿ ನಡೆಯುತ್ತಿದೆ 138 ಸ್ಥಳಗಳಲ್ಲಿ ನಿವೇಶನ ದೊರಕಿರುವುದಿಲ್ಲ ನಿವೇಶನವನ್ನು ಖರೀದಿಸುವುದಕ್ಕೆ ಅವಕಾಶವಿರುವುದಿಲ್ಲ.

ಆ) ವರ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ ಕೆಳಕಂಡ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯಗಳಿರುತ್ತವೆ.

1. ಕೆ.ಆರ್.ಪುರಂ
2. ದೇವಸಂದ್ರ
3. ವೈಟ್‌ಫೀಲ್ಡ

ಎಲ್ಲಾ ಮೂರು ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ.

ನಿವೇಶನಗಳು ದೊರಕದೆ ಇರುವುದರಿಂದ ಕಟ್ಟಡಗಳ ನಿರ್ಮಾಣಕ್ಕೆ ಹಣ ಮಂಜೂರಾಗಿರುವುದಿಲ್ಲ.

ವಿಷಯ:- ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆದ ಕಬ್ಬು

37(225)

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):- ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1996-97ನೇ ಸಾಲಿನ ಹಂಗಾಮಿನಲ್ಲಿ ಹಾವೇರಿ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿ ತಾಲ್ಲೂಕುವಾರು ಬೆಳೆದ ಕಬ್ಬಿನ ಕ್ಷೇತ್ರವೆಷ್ಟು;

ಆ) ಸದರಿ ಕಾರ್ಖಾನೆಯ ಕಬ್ಬು ಅರೆಯುವ ಕಾರ್ಯವನ್ನು ಎಂದಿನಿಂದ ಪ್ರಾರಂಭಿಸಿದೆ;

ಇ) 15-1-97ರವರೆಗೆ ಅರೆದ ಒಟ್ಟು ಕಬ್ಬಿನ ಸಾಮರ್ಥವೆಷ್ಟು ಹಾಗೂ 15-1-97ರವರೆಗೆ ಎಷ್ಟುದಿನ ಕಬ್ಬು ಅರೆಯಲಾಗಿದೆ?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು):-

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ದಿನಾಂಕ 2-11-96 ರಂದು.

ಇ) ದಿನಾಂಕ 15-1-97 ರವರೆಗೆ 59 ದಿನಗಳಲ್ಲಿ ಒಟ್ಟು 1,06,216 ಟನ್‌ಕಬ್ಬನ್ನು ಅರೆಯಲಾಗಿದೆ.